27.	**ಬೆಳಗಾಂ**	
1.	ಅಥಣಿ	1230.00
2.	ಬೈಲಹೊಂಗಲ	870.00
3.	ಬೆಳಗಾಂ	820.00
4.	ಚಿಕ್ಕೋಡಿ	1210.00
5.	ಗೋಕಾಕ್	1170.00
6.	ಹುಕ್ಕೇರಿ	850.00
7.	ಖಾನಾಪುರ	580.00
8.	ರಾಯಭಾಗ	870.00
9.	ರಾಮದುರ್ಗ	530.00
10.	ಸವದತ್ತಿ	800.00
	ಒಟ್ಟು	**8930.00**

1040 (1223) ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ರಾಜ್ಯದಲ್ಲಿ 8ನೇ ತರಗತಿಯಲ್ಲಿರುವ ಒಟ್ಟು ಹೆಣ್ಣುಮಕ್ಕಳ ಸಂಖ್ಯೆ ಎಷ್ಟು; ಅವರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಸಂಖ್ಯೆ ಎಷ್ಟು;

ಆ) ಈಗಾಗಲೇ ಎಷ್ಟು ಹೆಣ್ಣುಮಕ್ಕಳಿಗೆ ಸೈಕಲ್‌ಗಳನ್ನು ವಿತರಿಸಲಾಗಿದೆ; ಇದಕ್ಕಾಗಿ ಯಾವ ಪದ್ಧತಿ ಪ್ರಕಾರ ವಿತರಿಸಲಾಗಿದೆ;

ಇ) ಇದುವರೆಗೆ, ಒಂದೂ ಸೈಕಲ್ ಪಡೆದಿಲ್ಲದಿರುವ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ವಿತರಿಸದಿರಲು ಕಾರಣಗಳೇನು ಮತ್ತು ಸೈಕಲ್ ಪಡೆಯದೇ ಇರುವ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು; ಅವರೆಲ್ಲರಿಗೂ ಯಾವಾಗ ಸೈಕಲ್‌ಗಳನ್ನು ವಿತರಿಸಲಾಗುವುದು;

ಈ) ಶೈಕ್ಷಣಿಕ ವರ್ಷ ಮುಗಿಯುತ್ತಾ ಬಂದರೂ ಬಡತನ ರೇಖೆಗಿಂತ ಕೆಳಗಿರುವ ಸಾವಿರಾರು ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆಯಲ್ಲಿ ಈ ರೀತಿ ತಾರತಮ್ಯ ಮಾಡಲು ಕಾರಣಗಳೇನು; ಅಂಥವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಸೈಕಲ್ ಸಿಗಲಿಲ್ಲವೆಂದು ಅನೇಕ ಮಕ್ಕಳು ಮಾನಸಿಕವಾಗಿ ನೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2006–07ನೇ ಸಾಲಿನಲ್ಲಿ ಒಟ್ಟು 4,07,160 ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅವರಲ್ಲಿ 1,75,023 ವಿದ್ಯಾರ್ಥಿನಿಯರು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿರುತ್ತಾರೆ.

ಆ) ಒಟ್ಟು 1,75,023 ಬಾಲಕಿಯರಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿದೆ. ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ (ಬಿ.ಪಿ.ಎಲ್) ಸೇರಿದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ಮಾತ್ರ ಬೈಸಿಕಲ್ ವಿತರಿಸಲಾಗಿದೆ.

ಇ) ಒಂದೂ ಬೈಸಿಕಲ್ ವಿತರಿಸದಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆ ಯಾವುದೂ ಇರುವುದಿಲ್ಲ; ಮುಂದಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

1041 (1224) ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಕೃಷ್ಣಾ ನದಿಯ ಆಲಮಟ್ಟಿ ಮತ್ತು ಹಿಪ್ಪರಗಿ ಯೋಜನೆಯಡಿ ಮುಳುಗಡೆ ಆದ ಮತ್ತು ಇನ್ನೂ ಮುಳುಗಡೆಯಾಗುವ (519.60 ರಲ್ಲಿ ಮತ್ತು 524 ರಲ್ಲಿ) ಹಳ್ಳಿಗಳೆಷ್ಟು; ಎಷ್ಟು ಹಳ್ಳಿಗಳಿಗೆ ಈಗಾಗಲೇ ಪುನರ್ವಸತಿ ಕಲ್ಪಿಸಲಾಗಿದೆ; ಉಳಿದವುಗಳಿಗೆ ಯಾವಾಗ ಕಲ್ಪಿಸಲಾಗುವುವು; (ಪ್ರತ್ಯೇಕ ವಿವರ ಒದಗಿಸುವುದು);

ಆ) ಈ ಎರಡೂ ಯೋಜನೆಗಳಲ್ಲಿನ ಸಂತ್ರಸ್ಥರ ಕುಟುಂಬಗಳ ಸಂಖ್ಯೆ ಎಷ್ಟು, ಮುಳುಗಡೆಯಾದ ಮತ್ತು 524ಕ್ಕೆ ಮುಳುಗಡೆಯಾಗುವ ಜಮೀನುಗಳು ಎಷ್ಟು; (ಪ್ರತ್ಯೇಕ ವರದಿ ನೀಡುವುದು);